ಇತ್ತೀಚೆಗೆ ನಿಧನರಾದ ಕನ್ನಡ ಕತೆಗಾರ, ಕಾದಂಬರಿಕಾರ, ಅನುವಾದಕ ಶೇಷನಾರಾಯಣ (18–8–1927 – 07–8–2019) ಅವರ ಬದುಕು, ವ್ಯಕ್ತಿತ್ವ, ಸಾಧನೆಯನ್ನು ಪರಿಚಯಿಸುವ ಬರಹ ಇಲ್ಲಿದೆ.

ಬ್ರಿಟಿಷರನ್ನು 'ಭಾರತ ಬಿಟ್ಟು ತೊಲಗಿ' ಎಂದು ಚಳವಳಿ ಮಾಡುತ್ತಿದ್ದ ಸಂದರ್ಭದಲ್ಲಿ (1942) ತಮಿಳುನಾಡಿನ ಕೊಯಮತ್ತೂರು ಜಿಲ್ಲೆಗೆ ಸೇರಿದ್ದ ತಾಳವಾಡಿ ಫಿರ್ಕಾ ಪ್ರದೇಶದ ಪಾಳ್ಯದಿಂದ 15 ವರ್ಷದ ಶೇಷನಾರಾಯಣ ಎಂಬ ಹುಡುಗನೊಬ್ಬ ಹುಟ್ಟೂರನ್ನು ಯಾರಿಗೂ ತಿಳಿಸದೆ ಬಿಟ್ಟ. ಒಂದು ಹಂತದಲ್ಲಿ ಅದೆಷ್ಟೋ ಹುಡುಗರು ಮನೆಬಿಟ್ಟು ಹೋಗುವುದು ಸಾಮಾನ್ಯ. ವಿಚಿತ್ರ ಕಾರಣಕ್ಕಾಗಿ ಈ ಹುಡುಗ ಮನೆ ಬಿಟ್ಟು ಹೋಗುತ್ತಾನೆ. ಮುಂದೆ ಶಾನುಭೋಗನಾಗಲಿ ಎಂದು ನಾಲ್ಕನೆ ತರಗತಿಯ ತನಕ ತಮಿಳು ಮಾಧ್ಯಮದಲ್ಲಿ ಓದಿಸಿದ್ದರು ತಂದೆ ಶಾನುಭೋಗ ಸುಬ್ರಮಣ್ಯಂ. ಅದು ಮಗ ಮನೆಬಿಡಲು ಕಾರಣವಾಯಿತೆಂದು ತಡವಾಗಿ ಅವರಿಗೆ ಅರಿವಾಯಿತು.

ನಿಯತ್ತಿನ, ಶಿಸ್ತಿನ ಅರಣ್ಯ ಇಲಾಖೆಯ ಅಧಿಕಾರಿ ಗೋಪಾಲನ್ ನಾಯರ್ ಮೇಲೆ ಸುಳ್ಳು ಆರೋಪಗಳನ್ನು ಹೊರಿಸಿ ಒಬ್ಬ ರಾಜಕಾಣಿ ಬಾಲಕ ಶೇಷನಾರಾಯಣನಿಂದ ತಮಿಳಿನಲ್ಲಿ ಒಂದು ದೂರು ಬರೆಸಿದ. ಈ ಪಿತೂರಿಯಿಂದಾಗಿ ಗೋಪಾಲನ್ ತನ್ನ ವೃತ್ತಿಗೆ ರಾಜೀನಾಮೆ ಕೊಟ್ಟರಂತೆ. ತನ್ನಿಂದಾಗಿ ಒಬ್ಬ ಪ್ರಾಮಾಣಿಕ ಅಧಿಕಾರಿಗೆ ಅನ್ಯಾಯವಾಯಿತೆಂದು ಅನ್ನಿಸಿ ಬಾಲಕ ಮನೆಯವರಿಗೂ ಹೇಳದೆ ಊರು ಬಿಟ್ಟನಂತೆ.

ಐದು ರೂಪಾಯಿ ಜೇಬಿನಲ್ಲಿಟ್ಟುಕೊಂಡು ಕನ್ಯಾಕುಮಾರಿಯಿಂದ ದೆಹಲಿಯವರೆಗೆ ನಡೆದುಕೊಂಡೇ ಭಾರತದ ಮುಕ್ಕಾಲು ಭಾಗವನ್ನು ಶೇಷನಾರಾಯಣ ಸುತ್ತಿದ್ದಾರೆ ಎಂದರೆ ನಂಬುವುದು ಕಷ್ಟ. ಜೀವನೋಪಾಯಕ್ಕಾಗಿ ಕಡಲ ತೀರದಲ್ಲಿ ಗುಗ್ಗರಿ ಮಾರಾಟ, ಬಸ್ ಹಾಗೂ ರೈಲು ನಿಲ್ದಾಣದಲ್ಲಿ ಕೂಲಿ ಕೆಲಸ, ಹೋಟೆಲ್‌ನಲ್ಲಿ ರುಬ್ಬುವ ಕೆಲಸ, ಬೂಟ್ ಪಾಲಿಶ್, ಕಿರಾಣಿ ಅಂಗಡಿಯಲ್ಲಿ ಸಹಾಯಕ, ಹೋಟೆಲ್ ಮಾಣಿ – ಹೀಗೆ ಸಿಕ್ಕ ಎಲ್ಲ ರೀತಿಯ ಕೆಲಸ ಮಾಡಿ, ಬಿಡುವು ಸಿಕ್ಕಾಗ ಓದುವುದು, ಬರೆಯುವುದನ್ನು ರೂಢಿಸಿಕೊಂಡ ಬದುಕು ಆ ಹುಡುಗನದು. ಆ ಹುಡುಡುಗನೇ ಮುಂದೆ ಸಾಹಿತ್ಯ ಕ್ಷೇತ್ರಕ್ಕೆ ಕಾಲಿಟ್ಟಿದ್ದು 'ಮೂಲ ನಕ್ಷತ್ರ' ಎಂಬ ಕಾದಂಬರಿಯ ಮೂಲಕ.

ಹನ್ನೊಂದು ವರ್ಷದ ತಿರುಗಾಟ ಸಾಕೆನಿಸಿದಾಗ ಇಪ್ಪತ್ತಾರನೇ ವಯಸ್ಸಿನಲ್ಲಿ ಮನೆಯ ಹೊಸ್ತಿಲಿನಲ್ಲಿ ಪ್ರತ್ಯಕ್ಷರಾಗುತ್ತಾರೆ ಶೇಷನಾರಾಯಣ. ಎಲ್ಲರಿಗೂ ಆಶ್ಚರ್ಯ ಹಾಗೂ ಸಂತೋಷ. ಸೋದರಮಾವ ಐ.ಎನ್.ಎ. ರಾಮರಾವ್ ಹುಡುಗ ಬದುಕಿ ಉಳಿದಿರಲು ಸಾಧ್ಯವಿಲ್ಲ ಎಂಬ ನಿರ್ಧಾರಕ್ಕೆ ಬಂದಿದ್ದರು. ಮನೆಯವರೂ ಅದೇ ನಿರ್ಧಾರಕ್ಕೆ ಬಂದಿದ್ದರು. ರೈಲುಹಳಿಗಳ ಮೇಲೆ ಮಲಗಿ ಸಾಯುವ ಪ್ರಯತ್ನವೂ ಆಗಿತ್ತು. ಆದರೆ ಯಾರೋ ಬಂದು ಎಬ್ಬಿಸಿ ಬದುಕಿಸಿದ್ದರು.

### ಮುದ್ರಣದ 'ವಿಕಾಸ'

ಬರವಣಿಗೆ ಹವ್ಯಾಸಕ್ಕಾದರೆ ಹೊಟ್ಟೆಪಾಡಿಗಾಗಿ ನೆಚ್ಚಿಕೊಂಡಿದ್ದು ಮುದ್ರಣವನ್ನು. ತಮ್ಮದೇ ಮುದ್ರಣಾಲಯ 'ವಿಕಾಸ ಮುದ್ರಣ'ವನ್ನು ಪ್ರಾರಂಭಿಸಿದರು ಶೇಷನಾರಾಯಣರು. ಅಲ್ಲಿ ಮೊದಲು ಪ್ರಕಟವಾದ ಪುಸ್ತಕ ಅ.ರಾ. ಮಿತ್ರರ 'ಯಾರೋ ಬಂದಿದ್ದರು' ಲಲಿತ ಪ್ರಬಂಧ ಸಂಕಲನ. ಸಾಹಿತಿಯೇ